**ಸಂದರ್ಶನ: ಆನಂದ್ ಋಗ್ವೇದಿ**

# ಪ್ರತಿಭಟನೆ

## ಈಗಿನ ಮಹಿಳಾ ಸಾಹಿತ್ಯದ ದನಿ

**ಲೇಖಕಿ ಬಿ.ಟಿ. ಜಾಹ್ನವಿ ಸಂದರ್ಶನ**

ಕನ್ನಡದ ಸೂಕ್ಷ್ಮಸಂವೇದನೆಯ ಕತೆಗಾರ್ತಿ ಬಿ.ಟಿ. ಜಾಹ್ನವಿ. ಬರೆದದ್ದು ಕೆಲವೇ ಕತೆಗಳು. ಆದರೆ, ಅವು ಕನ್ನಡ ಓದುಗರಲ್ಲಿ ಹುಟ್ಟಿಸಿದ ಕಂಪನಗಳು ನೂರಾರು. ದಾವಣಗೆರೆಯ ಖ್ಯಾತ ಕಣ್ಣಿನ ತಜ್ಞರೂ, ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರೂ, ಚಿತ್ರದುರ್ಗ ಜಿಲ್ಲೆಯ ಭರಮಸಾಗರ ಕ್ಷೇತ್ರದ ಶಾಸಕರಾಗಿದ್ದ ಡಾ. ಬಿ.ಎಂ. ತಿಪ್ಪೇಸ್ವಾಮಿ ಹಾಗೂ ಯಲ್ಲಮ್ಮ ಅವರ ಮಗಳು ಜಾಹ್ನವಿ. ಸ್ನಾತಕೋತ್ತರ ಪದವಿ ಪಡೆದದ್ದು ಮತ್ತು ಬರವಣಿಗೆಯಲ್ಲಿ ತೊಡಗಿಸಿಕೊಂಡದ್ದು ವಿವಾಹದ ಬಳಿಕ. 1996ರಲ್ಲಿ ಮೊದಲ ಕಥೆ 'ಕಳೆದುಕೊಂಡವಳು' ಸುದ್ದಿಸಂಗಾತಿ ವಾರ ಪತ್ರಿಕೆಯಲ್ಲಿ ಪ್ರಕಟವಾಯ್ತು. ಸಾಹಿತ್ಯ ಕ್ಷೇತ್ರಕ್ಕೆ ಪರಿಚಿತರಾದದ್ದು 'ಲಂಕೇಶ್ ಪತ್ರಿಕೆ' ಮೂಲಕ. ಸುಮಾರು ಮೂವತ್ತಕ್ಕೂ ಹೆಚ್ಚು ಕಥೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಅವರ ಮೊದಲ ಕಥಾಸಂಕಲನ 'ಕಳೆದುಕೊಂಡವಳು ಹಾಗೂ ಇತರ ಕಥೆಗಳು' ಪಿ. ಲಂಕೇಶ್ ತಮ್ಮ ಪತ್ರಿಕೆ ಪ್ರಕಾಶನದಿಂದ ಪ್ರಕಟಿಸಿದರು. ಎರಡನೇ ಕಥಾಸಂಕಲನ 'ಹುಡುಕಾಟ' ಮಹರ್ಷಿ ಮಾತಂಗ ಪ್ರಕಾಶನದಿಂದ ಪ್ರಕಟವಾಗಿದೆ. ಇವರ ತಂದೆ ಡಾ. ಬಿ.ಎಂ. ತಿಪ್ಪೇಸ್ವಾಮಿ ಕುರಿತ ಸಂಪಾದಿತ ಕೃತಿ 'ಮುಟ್ಟಿಸಿಕೊಂಡವರು' (1999)ರಲ್ಲಿ ಪ್ರಕಟವಾಗಿದೆ. ಇದಲ್ಲದೆ ಕೆಲವು ಮಾಂಟೋ ಕಥೆಗಳ ಕನ್ನಡನುವಾದ, ದಿನಪತ್ರಿಕೆಗಳಲ್ಲಿ ಅಂಕಣ ಬರಹ ಮಾಡಿದ್ದಾರೆ.

